**ಅಸಲು ದಾವಾ ನಂಃ 215/2025**

**ಪಿಡಬ್ಲ್ಯು - 1 ಶಿವಕುಮಾರ ದಡ್ಡೂರ**

**ಸಾಕ್ಷಿಯನ್ನು ದಿನಾಂಕಃ 11-08-2026 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು. ಮುಖ್ಯ ವಿಚಾರಣೆಃ ವಾದಿ ಪರ ಪರ ಶ್ರೀ, ವಿ.ಎಸ್.ಬಂಗಾರಿ ವಕೀಲರಿಂದಃ**

1. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ನನ್ನ ನಿಲುವಿಗೆ ಸಂಬಂಧಿಸಿದಂತೆ, ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ಅದನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಗಿದೆ.

| | | |
|---|---|---|
| ನಿಪಿ - 1 | : | ನಿವೇಶನದ ಹಕ್ಕು ಪತ್ರ |
| ನಿಪಿ - 2 | : | ಖಾತಾ ಉತಾರ |
| ನಿಪಿ - 3 | : | ದಿಃ 06-07-1998 ರ ಗ್ರಾಮ ಪಂಚಾಯತಿ ಸಭಾ ನಡುವಳಿಕೆಯ ದೃಢೀಕೃತ ನಕಲು |
| ನಿಪಿ - 4 | : | ಮರಣ ಪ್ರಮಾಣ ಪತ್ರ |
| ನಿಪಿ - 5 | : | ರೋಣ ಮಿಸಲು ಕ್ಷೇತ್ರದ ಮತದಾರರ ಯಾದಿ |
| ನಿಪಿ - 6 | : | ಉದ್ಯೋಗ ಖಾತ್ರಿ ಕುಟುಂಬದ ಉದ್ಯೋಗ ಚೀಟಿ |
| ನಿಪಿ - 7 | : | ವೃದ್ಧಾಪ ವೇತನದ ಆದೇಶದ ದೃಢೀಕೃತ ನಕಲು |
| ನಿಪಿ - 8 | : | ಪಡಿತರ ಚೀಟಿ |
| ನಿಪಿ - 9 ಮತ್ತು 10 | : | ನೀಡಗುಂದಿ ಪಿ.ಡಿ.ಓರವರಿಗೆ ಮೃತ್ಯು ಪತ್ರ ಆಧರಿಸಿ ಹಕ್ಕು ಬದಲಾವಣೆ ಮಾಡಲು ದಿಃ 29-04-2025 ರಂದು ನೀಡಿರುವ ಅರ್ಜಿ ಹಾಗೂ ಅದಕ್ಕೆ ಸಲ್ಲಿಸಿರುವ ತಕರಾರಿನ ದೃಢೀಕೃತ ನಕಲು (ನಿಪಿ - 10 ಒಂದೇ ಪುಟದಲ್ಲಿ ಇರುತ್ತದೆ) |
| ನಿಪಿ - 11 | : | ಯಲ್ಲಪ್ಪ ನಿಂಗಪ್ಪ ದಡ್ಡೂರರವರ ಆಧಾರ ಕಾರ್ಡನ ದೃಢೀಕೃತ ನಕಲು |
| ನಿಪಿ - 12 | : | ಸಲಬವ್ವರವರ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲು |
| ನಿಪಿ - 13 | : | 3 ನೇ ಪ್ರತಿವಾದಿಯು ಸಲ್ಲಿಸಿದ ತಕರಾರಿನ ದೃಢೀಕೃತ ನಕಲು |
| ನಿಪಿ - 14 | : | 2 ಮತ್ತು 3 ನೇ ಪ್ರತಿವಾದಿಯು ನೀಡಿರುವ ತಕರಾರಿನ ದೃಢೀಕೃತ ನಕಲು |
| ನಿಪಿ - 15 ಮತ್ತು 16 | : | 2 ಮತ್ತು 3 ನೇ ಪ್ರತಿವಾದಿಗಳ ಆಧಾರ ಕಾರ್ಡಗಳ ದೃಢೀಕೃತ ನಕಲುಗಳು |
| ನಿಪಿ - 17 ಮತ್ತು 18 | : | ಶಿವಪ್ಪ ಮಲ್ಲಪ್ಪ ಜಕ್ಕಲಿರವರ ಮರಣ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿಯ ದೃಢೀಕೃತ ನಕಲುಗಳು |

| | | |
|---|---|---|
| ನಿಪಿ - 19 | : | ಹಿರಿಯರ ಸಮಕ್ಷಮ ಆದ ತೀರ್ಮಾನದ ದೃಢೀಕೃತ ನಕಲು |
| ನಿಪಿ - 20 | : | ಪಂಚಾಯತಿಯವರು ನೀಡಿರುವ ಹಿಂಬರಹದ ದೃಢೀಕೃತ ನಕಲು |
| ನಿಪಿ - 21 | : | 1 ನೇ ಪ್ರತಿವಾದಿ ಸಲ್ಲಿಸಿರುವ ಕೆವಿಯಟ್ ಅರ್ಜಿಯ ನಕಲು |

**ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕು ಎಂದು ಕೋರಿಕೊಳ್ಳುತ್ತೇನೆ.**

**ಪಾಟೀ ಸವಾಲುಃ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-sd-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ